# ಮಾದರಿ ಪ್ರಶ್ನೆಪತ್ರಿಕೆ ೯.

## ಪ್ರಥಮ ಭಾಷೆ ಕನ್ನಡ        ೧೦ ನೇ ತರಗತಿ

## ಗರಿಷ್ಠ ಅಂಕ: ೧೦೦                 ಅವಧಿ : ೨.೪೫ ಗಂಟೆಗಳು

### ಭಾಗ -'ಎ'

**ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧**

೧.ಗೊರೂರು ರಾಮಸ್ವಾಮಿ ಅಯ್ಯಂಗಾರರು ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು ?

೨. ಅಮೆರಿಕಕ್ಕೆ ಹೋದ ಗೊರೂರರು ಯಾರ ಮನೆಯಲ್ಲಿ ತಂಗಿದ್ದರು ?

೩. ಅಂತರ್ಜೀವಿಗೆ ಯಾವುದು ಸಮಸ್ಯೆಯಾಗುತ್ತದೆ ?

೪.ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು ?

೫.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?

೬.ನದೀಜಲಗಳು ಏನಾಗಿವೆ ?

೭.ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?

೮.ಕರ್ಣನು ಯಾರನ್ನು ತನ್ನ ದಾತಾರ ಎಂದಿದ್ದಾನೆ ?

೯. ಹಿಂದಿನ ತಲೆಮಾರಿನ ಜನಸಾಮಾನ್ಯರು ಯಾವುದಕ್ಕೆ ಆಸೆ ಪಡುತ್ತಿರಲಿಲ್ಲ ?

೧೦.ಗಾಂಧೀಜಿಯವರ ಬಾಳಿನಲ್ಲಿ ಪರಿಣಾಮಕಾರಿಯಾದ ಬದಲಾವಣೆ ಮಾಡಿದ ಪುಸ್ತಕ ಯಾವುದು ?

೧೧.ಪಾರಿವಾಳಗಳು ವಿವೇಕ ಕಳೆದುಕೊಳ್ಳಲು ಕಾರಣವೇನು ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨.ಅಮೆರಿಕದ ವಿದ್ಯಾರ್ಥಿಗಳಿಗೆ ಗೊರೂರರು ಗಾಂಧೀಜಿಯವರನ್ನು ಕುರಿತು ಏನು ಹೇಳಿದರು ?

೧೩.ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನು ಆಹ್ವಾನಿಸಿದನು ?

೧೪.ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯನವರು ಮಾಡಿದ ಮಾರ್ಪಾಡುಗಳು ಯಾವುವು ?

೧೫. ಮೈಸೂರಿನ ಜನತೆ ವಿಶ್ವೇಶ್ವರಯ್ಯನವರನ್ನು ಹಾಡಿ ಹೊಗಳಲು ಕಾರಣವೇನು ?

೧೬.ಭಕ್ತಿಯ ಮಹತ್ವ ಜೇಡರದಾಸಿಮಯ್ಯನವರ ವಚನದಲ್ಲಿ ಹೇಗೆ ವ್ಯಕ್ತವಾಗಿದೆ ?

೧೭. ಮನೆಯೊಳಗೆ ಮನೆಯೊಡೆಯನಿಲ್ಲ ಎಂದು ಬಸವಣ್ಣನವರು ಹೇಳಿದುದರ ಸ್ವಾರಸ್ಯ ತಿಳಿಸಿ

೧೮.ಯುದ್ಧದ ವಿಚಾರದಲ್ಲಿ ಕರ್ಣನ ನಿರ್ಧಾರವೇನು ?

೧೯.ವಿಜ್ಞಾನಿಗಳ ವೈರುದ್ಧ್ಯ ಭಾವನೆಯನ್ನು ವಿವರಿಸಿರಿ.

೨೦. ತಾವರೆಯ ಕುರಿತು ಇರುವ ಜನಪದ ಒಗಟನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨**

೨೧. ''ಎಲ್ಲ ಜನರಿಗೆ ಜೋರು ಮಾಡಿ ಕಸಿದುಕೊಳ್ಳಿರಿ ಹತಾರ .''

೨೨. ''ಪ್ರೀತಿಯ ಹಣತೆಯ ಹಚ್ಚೋಣ.''

೨೩. ''ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ''

೨೪. ''ಜೀವನ ರಥಕ್ಕೆ ಒಗ್ಗಾಲಿಯ ಭೀತಿಯಿದೆ''.

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

೨೫. ದೇವನೂರು ಮಹಾದೇವ

೨೬. ದು.ಸರಸ್ವತಿ

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ನೀನುಳ್ಳೊಡೆ--------

-----------------

--------------------

-----------------ನಂದಿದೊಡೇಂ

ಅಥವಾ

ಕುರುಕುಳ----------

-------------------

----------------

-------------- ಗಿಂಬುಕೆಯ್

**ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮**

೨೮.ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

ಅಥವಾ

ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

೩೦. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

ಅಥವಾ

ಲವನ ನಡುವಳಿಕೆ ಮೆಚ್ಚಿಕೆಯಾಯಿತೇ ?ಏಕೆ ?

೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ಶಬರಿ : ರಾಮ ಬಾರದೇ | ನನಗೇನು ತೋರದೇ !!ಪ!!

ಅವ ಸವಿದಲ್ಲದೆ ಸವಿಯಾಗದ ಈ | ಕಡುಸವಿ ಹಣ್ಗಳನೇಗೆಯ್ವೆಂ

ಮಧುಕರ ಗೀತದ ಮಧು ಊರಿರುವೀ | ಮಧುಪರ್ಕವ ನಾನಾರ್ಗೀವೆಂ ||ರಾಮ ಬಾರದೇ...............

ಬಾ ರಾಮ , ಬಾ ರಾಮಾ, ಬಾರೈ | ಬಾ ಬಾ ಬಗೆಯಿರುಳಿನ ಪೆರೆಯೇ

ಕೋ ಕೋ ಹಣ್ಗಳ ಕೋ ಹೂಗಳ ಕೋ |ಎಲ್ಲವ ಕೋ ಎನ್ನೊಳ ಮೊರೆಯೇ

ರಾಮ ಬಾರದೇ | ನನಗೇನು ಸೇರದೇ.

[ಪರ್ಣಶಾಲೆಯೊಳಕ್ಕೆ ಹೋಗುವಳು. ರಾಮಲಕ್ಷ್ಮಣರು ಕಾಣಿಸಿಕೊಳ್ಳುತ್ತಾರೆ]

ರಾಮ : ಎನಗಿನಿತು ಹಂಬಲಿಪ ಈ ಜಟಿಲಕಬರಿ | ಆ ಉದರಮುಖನೊರೆದ ಶ್ರಮಣಿ ಶಬರಿ .ಉಪಕಾರವಿನಿತಲ್ಲ ಈಕೆಗೆನ್ನಿಂದ | ಆದೊಡೆಯು ನೆನೆಯುತಿಹಳೆನಿತರ್ತಿಯಿಂದ !

ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ

ಪ್ರಶ್ನೆಗಳು : ರಾಮನ ಸ್ವಾಗತಕ್ಕೆ ಸಿದ್ಧತೆ ಮಾಡಿಕೊಂಡ ಶಬರಿ ಅದನ್ನು ಕುರಿತು ಹೇಳಿದ ಮಾತುಗಳನ್ನು ಬರೆಯಿರಿ.

೨. ತನಗಾಗಿ ಹಂಬಲಿಸುತ್ತಿರುವ ಶಬರಿಯ ಕುರಿತು ರಾಮನು ಏನು ಹೇಳಿದನು ?

ಭಾಗ – 'ಬಿ'

ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ

mamatabhagwat1@gmail.com

ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ ೧೦*೧=೧೦

೩೨. 'ಶ್ರೀಮನ್ಮಹಾ' ಪದವು ಈ ಸಂಧಿಗೆ ಉದಾಹರಣೆಯಾಗಿದೆ _____

ಎ ) ಗುಣ ಸಂಧಿ ಬಿ )ಜಶ್ತ್ವಸಂಧಿ ಸಿ )ಅನುನಾಸಿಕ ಸಂಧಿ ಡಿ) ಶ್ಚುತ್ವಸಂಧಿ

೩೩. 'ವರ್ಷವರ್ಷ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ _

ಎ) ದ್ವಿರುಕ್ತಿ ಬಿ ) ಜೋಡುನುಡಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು

೩೪. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಈ ವಾಕ್ಯವೆನಿಸುವುದು .---

ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತ ವಾಕ್ಯ ಸಿ)ಮಿಶ್ರವಾಕ್ಯ ಡಿ) ನಿಷೇಧಾರ್ಥಕ ವಾಕ್ಯ

೩೫.ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ—--

ಎ) ೧೦ ಬಿ) ೯ ಸಿ) ೩೨ ಡಿ)೫

೩೬.'ವಿಸ್ಮಯಂಬಟ್ಟು' ಪದದಲ್ಲಿರುವ ಸಮಾಸವಿದು ------

ಎ) ಕರ್ಮಧಾರಯ ಸಮಾಸ ಬಿ)ಕ್ರಿಯಾ ಸಮಾಸ ಸಿ)ತತ್ಪುರುಷ ಸಮಾಸ ಡಿ) ಗಮಕ ಸಮಾಸ

೩೭. 'ಬೇಹಾರಿ' ಪದವು ಈ ಮಾದರಿಯ ನಾಮಪದಕ್ಕೆ ಉದಾಹರಣೆಯಾಗಿದೆ ----

ಎ) ರೂಢನಾಮ ಬಿ) ಅಂಕಿತನಾಮ ಸಿ) ಅನ್ವರ್ಥಕ ನಾಮ ಡಿ) ಸರ್ವನಾಮ

೩೮. ಮುಖಕ್ಕೆ ಪದದಲ್ಲಿರುವ ವಿಭಕ್ತಿ —---

ಎ) ಪ್ರಥಮಾ ಬಿ)ದ್ವಿತೀಯಾ ಸಿ)ತೃತೀಯಾ ಡಿ) ಚತುರ್ಥಿ

೩೯. 'ಕನ್ನಡಿಗ 'ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ---

ಎ) ತದ್ಧಿತಾಂತನಾಮ ಬಿ) ತದ್ಧಿತಾಂತಭಾವನಾಮ ಸಿ) ತದ್ಧಿತಾಂತಾವ್ಯಯ ಡಿ) ಕೃದಂತಾವ್ಯಯ

೪೦. 'ಹೋಗಲೀಯದು' ಪದವು ಕ್ರಿಯಾಪದದ ಈ ರೂಪಕ್ಕೆ ಉದಾಹರಣೆಯಾಗಿದೆ ---

ಎ) ವಿಧ್ಯರ್ಥಕ ಬಿ)ನಿಷೇಧಾರ್ಥಕ ಸಿ)ಸಂಭಾವನಾರ್ಥಕ ಡಿ) ಸಾಮಾನ್ಯಾರ್ಥಕ

೪೧. 'ಇಸವಾಸ' ಪದದ ಗ್ರಾಂಥಿಕ ರೂಪ —---

ಎ) ಇಸ್ವಾಸ ಬಿ)ವಿಶವಾಸ ಸಿ) ವಿಶ್ವಾಸ ಡಿ) ಸಹವಾಸ

mamatabhagwat1@gmail.com

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ.೪*೧=೪

೪೨.ಮೊಗಸಾಲೆ : ಮುಖಶಾಲೆ : : ಬಿನ್ನಾಣ : ___

೪೩.ಅಲ್ಪಸ್ವಲ್ಪ : ಜೋಡುನುಡಿ : : ಗುಜುಗುಜು : ________

೪೪. ಪಗೆ : ಹಗೆ : : ಪೇಳ್ : ___

೪೫.ನೋಟ : ಕೃದಂತಭಾವನಾಮ : : ಪೆರ್ಮೆ : ___

೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂದನಂ

ಅಥವಾ

ಪಗೆಗೆ ಕಣೆಯೊಂದುಂಟೇ ನಣ್ಪಂಗಮಾಗರಮುಂಟೆ ನೀಂ

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩

'ಅಮೃತದೊಳು ವಿಷ ಬೆರೆತಂತೆ'

ಅಥವಾ

'ಮರನನೇರಿದ ಮರ್ಕಟನಂತೆ'

ಭಾಗ -'ಸಿ'

ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩

೧.ಸತ್ಯಕ್ಕೆ ಸಾವಿಲ್ಲ ; ಸುಳ್ಳಿಗೆ ಸುಖವಿಲ್ಲ .

೨.ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

೩.ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ?

mamatabhagwat1@gmail.com

೪೯. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ, ದೇವನದುರ್ಗದಲ್ಲಿ  ಓದುತ್ತಿರುವ ನವ್ಯ/ನವೀನ್ ಎಂದು ಭಾವಿಸಿ ಕಿತ್ತೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ನಿಮ್ಮ ಸ್ನೇಹಿತೆ/ಸ್ನೇಹಿತ (ಶೈಲಜಾ/ದೀಪಕ್ )ನಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವದ ಕುರಿತು ಪತ್ರ ಬರೆಯಿರಿ.                    ೧*೫=೫

ಅಥವಾ

ನಿಮ್ಮ ಊರಿನ ರಸ್ತೆ ದುರಸ್ತಿ ಮಾಡುವಂತೆ ಕೋರಿ ಜಿಲ್ಲಾಪಂಚಾಯತಿಯ ಅಧ್ಯಕ್ಷರಿಗೆ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

೧. ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು

೨. ರಾಷ್ಟ್ರೀಯ ಭಾವೈಕ್ಯತೆ

೩.ಸಮೂಹ ಮಾಧ್ಯಮ

************************************************************